ಓ ಎಸ್ ನಂ 21/2016

ಪಿ. ಡಬ್ಲ್ಯೂ : 1

ದಿಃ 20.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಎಂ ಎನ್ ವಕೀಲರಿಂದ :

ಓ ಎಸ್ 29/2016 ಇದು ವಜಾ ಆಗಿಲ್ಲ ಇನ್ನು ಚಾಲ್ತಿಯಲ್ಲಿದೆ, ತೀರ್ಪಿಗಾಗಿ ಇಟ್ಟುಕೊಂಡಿದ್ದಾರೆ. ನಾನು ಕಳೆದ ಬಾರಿ ವಜಾ ಆಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಓ ಎಸ್ 154/2007 ರಲ್ಲಿ ಕೇಸ್ ಚಾಲ್ತಿಯಲ್ಲಿದ್ದಾಗ ಹದ್ದಬಸ್ತ್ ಮಾಡಿಕೊಡಲು 2007 ರಲ್ಲಿ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. 2007 ರಲ್ಲಿ ಸ.ನ. 1/2 ಇದು ಅಳತೆಯಾಗಿದ್ದು ನನಗೆ ಗೊತ್ತಿತ್ತು, ಆದರೆ ಅದು ಪೂರ್ತಿಯಾಗಿ ಅಳತೆ ಯಾಗಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ದಿನಾಂಕಃ 26.05.2009 ರಲ್ಲಿ ನಾನು ಸಂಪೂರ್ಣ ಸ.ನಂಬರ್ ನ್ನು ಅಳತೆ ಮಾಡಲು ಅರ್ಜಿ ಕೊಟ್ಟಿದ್ದೇನು. 2007 ರಲ್ಲಿಯೇ ಸ್ಕೆಚ್ ಗಳನ್ನು ಪಡೆದಿದ್ದೇನು ಎಂದರೆ ಸರಿಯಲ್ಲ. 2009 ರಲ್ಲಿ ಪಡೆದಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ.

ಸ.ನಂ. 1/1 ಮತ್ತು 1/2 ರಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಸರ್ಕಾರಿ ರಸ್ತೆಗಳು ಇವೆ ಎಂದರೆ ಸರಿಯಲ್ಲ. ಪೂರ್ವದಿಂದ ದಕ್ಷಿಣಕ್ಕೆ ಇವೆ ಎಂದು ಸಾಕ್ಷಿ ಹೇಳುತ್ತಾರೆ. ನನಗೆ ಸೇರಿದ 3 ಎಕರೆ 21 ಗುಂಟೆಯಲ್ಲಿ ನಕಾಶೆ ರಸ್ತೆ ಬರುವುದಿಲ್ಲ. ನಾನು ನಮ್ಮ ತಮ್ಮ ಡಿ ಸಿ ಶಿವಣ್ಣ ಇವರಿಗೆ ಸ.ನಂ. 1/3 ರಲ್ಲಿ 7 ಗುಂಟೆ ಜಮೀನು ಕೊಟ್ಟಿದ್ದೇನೆ ಎಂದರೆ ಸರಿ. ಅದನ್ನು ಅವರು ಉಪಯೋಗ ಮಾಡದ ಕಾರಣ ನನ್ನ ತಮ್ಮ ಕುಮಾರಸ್ವಾಮಿ ಉಪಯೋಗಿಸುತ್ತಿದ್ದಾನೆ. **ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ 7 ಎಂದು ಗುರುತಿಸಲಾಯಿತು.** ಡಿ ಸಿ ಶಿವಣ್ಣ ಇವರ ಹೆಸರಿನಲ್ಲಿ ಯಾವುದೆ ಖಾತೆ ಪಹಣಿಗಳು ಆಗಿಲ್ಲ, ಮನೆ ಕಟ್ಟಿಕೊಳ್ಳಲು ಬಿಟ್ಟಿದ್ದೆನು ಎಂದು ಸಾಕ್ಷಿ ಹೇಳುತ್ತಾರೆ. ಶಿವಣ್ಣ ಇವರು ಆ ಸ್ವತ್ತನ್ನು ನನಗೆ ಹಿಂದಿರುಗಿಸಿ ಪತ್ರ ಬರೆದುಕೊಟ್ಟಿಲ್ಲ. ಅವರು ಸ್ವಾಧೀನ ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿರುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ನಂತರ ಅದೇ ಸ್ವತ್ತನ್ನು ನಾನು ಕುಮಾರಸ್ವಾಮಿಗೆ ಬಿಟ್ಟುಕೊಟ್ಟಿದ್ದೇನೆ.

ಕುಮಾರಸ್ವಾಮಿ ಈ ಕೇಸ್ ನಲ್ಲಿ ಪಾರ್ಟಿ ಅಲ್ಲ ಎಂದರೆ ಸರಿ. ನಾನು ಅದನ್ನು ಸೇರಿಸಿ ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ನನಗೆ ಚೆಕ್ ಬಂದಿ ಹೇಳಲು

ಬರುವುದಿಲ್ಲ. ಅದರ ಒಟ್ಟು ಸ್ವತ್ತಿನ ಚೆಕ್ ಬಂದಿ ಹೇಳಲು ಬರುತ್ತದೆ. ಕುಮಾರಸ್ವಾಮಿ ನನಗೆ ಭಾಗ ಕೊಟ್ಟಿಲ್ಲ ಎಂದು ಓ ಎಸ್ 44/2014 ಎನ್ನುವ ದಾವೆ ಮಾಡಿದ್ದನು, ಅದನ್ನು ಪ್ರತಿವಾದಿಗಳೆ ಮಾಡಿಸಿದ್ದರು. ಅದರಲ್ಲಿ ರಾಜಿ ಅರ್ಜಿ ಹಾಕಲಾಗಿತ್ತು ಎಂದರೆ ಸರಿಯಲ್ಲ. ಅದರಲ್ಲಿ ನಾವು ಅಣ್ಣ ತಮ್ಮಂದಿರು ರಾಜಿ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. 2006 ರಲ್ಲಿ ನಾನು ತಹಶೀಲ್ದಾರ್ ಇವರಿಗೆ ಒಂದು ಮನವಿ ಪತ್ರ ಕೊಟ್ಟಿದ್ದೇನು. ನನ್ನ ಜಮೀನು ಒತ್ತುವರಿ ಆಗಿದೆ, ಅದನ್ನು ಸರಿ ಮಾಡಿಕೊಡಿ ಎಂದು ಕೇಳಿದ್ದೇನು. ಆಗ ನನಗೆ ಒತ್ತುವರಿಯಾಗಿದೆ ಎಂದು ಗೊತ್ತಾಗಿತ್ತು. 2016 ರವರೆಗೆ ಯಾವುದೆ ದಾವೆ ಹಾಕಿರಲಿಲ್ಲ ಎಂದರೆ ಸರಿ. 2006 ರಲ್ಲಿಯೇ ಶಿವಶಂಕರ್ ಇವರು ನಾನು ಹಾಕಿದ್ದ ಫೆನ್ಸನ್ನು ಕಿತ್ತು ಅತಿಕ್ರಮಣ ಮಾಡಿಕೊಂಡಿದ್ದಾರೆ.

ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಪ್ರತಿವಾದಿಯ ಜಮೀನು ಬರುತ್ತದೆ. ಸ.ನಂ. 1/3 ರಲ್ಲಿ ಶಿವಣ್ಣ ಮತ್ತು ಗಂಗಾಧರ್ ಇವರ ಜಮೀನುಗಳು ಬರುತ್ತವೆ. ಪಶ್ಚಿಮಕ್ಕೆ ಓಂಕಾರಪ್ಪ ಇವರ ಜಮೀನು ಇರುತ್ತದೆ. ಉತ್ತರಕ್ಕೆ ರಾಮಯ್ಯ ಎನ್ನುವವರು ಸ.ನಂ. 44 ಬರುತ್ತದೆ. ದಕ್ಷಿಣಕ್ಕೆ ಒತ್ತುವರಿಯಾದ 36 ಗುಂಟೆ ಜಮೀನು ಇರುತ್ತದೆ. 19 ಗುಂಟೆ ಪೂರ್ವಕ್ಕೆ ನಮ್ಮ ತಂದೆಗೆ ಸೇರಿದ ತಲಾ 20 ಗುಂಟೆ ಎಲ್ಲರಿಗು ಬಂದ ಜಮೀನು ಇರುತ್ತದೆ. ಒತ್ತುವರಿಯಾದ ಜಮೀನಿನ ಪಶ್ಚಿಮಕ್ಕೆ ಸ.ನಂ. 45 ಮತ್ತು ಎ ಕೆ ಎಂಬುವವರ ಜಮೀನು ಬರುತ್ತದೆ. ಉತ್ತರಕ್ಕೆ ನನ್ನ ಜಮೀನು ಬರುತ್ತದೆ ಮತ್ತು ದಕ್ಷಿಣಕ್ಕೆ ರಾಜಣ್ಣ ಇವರ ಜಮೀನು ಬರುತ್ತದೆ. ಶೆಡ್ಯೂಲ್ ಬಿ ಸ್ವತ್ತಿಗೆ ಹೊಂದಿಕೊಂಡಂತೆ ಪ್ರತಿವಾದಿಯ ಜಮೀನು ಇರುವುದಿಲ್ಲ ಎಂದರೆ ಸರಿ. ಸ.ನ. 1 ರಲ್ಲಿ ನಮ್ಮ ತಂದೆಗೆ ಬಂದ ಜಮೀನು ಉತ್ತರಕ್ಕೆ ಇರುತ್ತದೆ. ನಂತರ ಗಂಗಾಧರಯ್ಯ ಇವರ ಜಮೀನು ಬರುತ್ತದೆ. ನಂತರ ದಕ್ಷಿಣಕ್ಕೆ ಜಯಣ್ಣ ಇವರ ಜಮೀನು ಬರುತ್ತದೆ. ಜಯಣ್ಣ ಇವರ ಮಗನೆ ಶಿವಶಂಕರ್ ಎಂದರೆ ಸರಿ.

ನಮ್ಮ ತಂದೆ ಹಾಗೂ ಅವರ ಅಣ್ಣ ತಮ್ಮಂದಿರು ಭಾಗವಾದ ರೀತಿಯಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಮಗೆ 36 ಗುಂಟೆ ಕಡಿಮೆ ಸ್ವಾಧೀನದಲ್ಲಿರುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಂದೆಗೆ ಕೊಟ್ಟಿದ್ದ ಸಂಪೂರ್ಣ ಸ್ವತ್ತಿಗೆ ನಾನು ಫೆನ್ಸಿಂಗ್ ಮಾಡಿದ್ದೇನೆ ಎಂದರೆ ಸರಿಯಲ್ಲ. ಒತ್ತುವರಿಯಾದ ಜಮೀನನ್ನು ಬಿಟ್ಟು ಮಾಡಿದ್ದೇನೆಂದು ಸಾಕ್ಷಿ ಹೇಳುತ್ತಾರೆ. ನಾನು 2009 ರಲ್ಲಿ ಫೆನ್ಸಿಂಗ್ ಮಾಡಿಸಿದ್ದೇನೆ.
ನಾನು ಫೆನ್ಸಿಂಗ್ ಮಾಡಿದ ಜಮೀನಿನಲ್ಲಿ 4 ದಿಕ್ಕಿಗೂ ಮರಗಳನ್ನು ಬೆಳಿಸಿದ್ದೇನೆ ಎಂದರೆ ಸರಿ. ಅವುಗಳು ಈಗ 20 ವರ್ಷದ ಮರಗಳಿರುತ್ತವೆ ಎಂದರೆ ಸರಿ. ದೊಳ್ಳೇನಹಳ್ಳಿಗೆ ಬಂದರೆ ಗಲಾಟೆ ಮಾಡುತ್ತಾರೆಂದು ನಾನು ಪ್ರತಿವಾದಿಗಳ ವಿರುದ್ದ ದೂರು ಕೊಟ್ಟಿದ್ದೇನೆ. ಸ.ನಂ. 44 ಅಥವಾ 45 ರ ಸ್ವತ್ತಿನವರು ನಮ್ಮ ಜಮೀನಿನಲ್ಲಿ ಅತಿಕ್ರಮಣ ಮಾಡಿಲ್ಲ. ಆ ಬಗ್ಗೆ ನಾನು ಎಲೆಕ್ಟ್ರಾನಿಕ್ ಸರ್ವೇ ಮಾಡಿಸಿದ್ದೇನೆ. ಗಂಗಾಧರಯ್ಯ ಇವರಿಗೆ ಕೊಟ್ಟ ಭಾಗದ ಪ್ರಕಾರ ಅವರ ಮಕ್ಕಳು

ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಜಯಣ್ಣ ಇವರಿಗೆ ಬಂದ ಭಾಗದಲ್ಲಿ ಅವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ರಸ್ತೆಯನ್ನು ಸೇರಿಸಿ ಎಲೆಕ್ಟ್ರಾನಿಕ್ ಅಳತೆ ಮಾಡಿದ್ದಾರೆ. ಆ ರಸ್ತೆ ಖಾಸಗಿ ರಸ್ತೆ ಇರುತ್ತದೆ, ಅದನ್ನು ನಾವು ಬಿಟ್ಟುಕೊಂಡಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ.

ನಿ ಪಿ 11 ರಲ್ಲಿ ಖಾಸಗಿ ರಸ್ತೆಯ ವಿಸ್ತೀರ್ಣ ಎಷ್ಟಿದೆ ಹಾಗೂ ಸಾಗುವಳಿ ಜಮೀನು ಎಷ್ಟಿದೆ ಎಂದು ಅಳತೆ ಮಾಡಿ ಬರೆದಿಲ್ಲ. ನಿ ಪಿ 30 ರಲ್ಲಿ ಸಿಂಗಲ್ ಡಾಟ್ ರಸ್ತೆ ಎಷ್ಟಿದೆ ಎಂದು ಬರೆದಿಲ್ಲ ಎಂದರೆ ಸರಿ. ಒತ್ತುವರಿ ಯಾವ ವರ್ಷ ಆಗಿದೆ ಎಂದು ನನಗೆ ಗೊತ್ತಿಲ್ಲ. 2009 ರಲ್ಲಿ ನನಗೆ ಗೊತ್ತಾಗಿದೆ. 2009 ಕ್ಕಿಂತ ಮೊದಲು ಆ ಸ್ವತ್ತು ಪ್ರತಿವಾದಿಗಳ ಸ್ವಾಧೀನದಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಭಾಗ ಕೊಟ್ಟ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಯಾವುದೆ ಅತಿಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. ಈ ಕೇಸ್ ಗೋಸ್ಕರ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ವಾದಿ ಪರ ಶ್ರೀ ಎಂ ಎಸ್ ಎಸ್ ವಕೀಲರಿಂದ ಃ

ದಿನಾಂಕ ಃ 12.06.2018 ರಂದು ನಾನು ಮುಖ್ಯ ವಿಚಾರಣೆ ಹೇಳುವ ಸಂದರ್ಭದಲ್ಲಿ ನಿ ಪಿ 37 ರಿಂದ ನಿ ಪಿ 111 ವರೆಗಿನ ದಾಖಲೆಗಳನ್ನು ಗುರುತಿಸುವಾಗ ಕೆಲವು ತಪ್ಪುಗಳಾಗಿವೆ. ನಾನು 3 ಅಂಚೆ ಸ್ವೀಕೃತಿ ಪತ್ರಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಪಿ 37 ರಿಂದ ನಿ ಪಿ 39 ಎಂದು, ದಿನಾಂಕ ಃ 10.09.2011 ರ ಕ್ಯಾಷ್ ಬಿಲ್ಲನ್ನು ನಿ ಪಿ 40 ಎಂದು, ದಿನಾಂಕ ಃ 15.11.2011 ರ ಕ್ಯಾಷ್ ಬಿಲ್ಲನ್ನು ನಿ ಪಿ 41 ಎಂದು, 7 ಕೆ ಇ ಬಿ ಬಿಲ್ಲುಗಳನ್ನು ನಿ ಪಿ 42 ರಿಂದ ನಿ ಪಿ 48 ಎಂದು, ವಾದಿ ಕುದೂರು ಪೊಲೀಸರಿಗೆ ಕೊಟ್ಟ ದೂರಿನ ಪ್ರತಿಯನ್ನು ನಿಪಿ 49 ಎಂದು, ಸಿಸಿ 13/2012 ರಲ್ಲೀನ ಆದೇಶಪುಟದ ಪ್ರತಿಯನ್ನು ನಿಪಿ 50 ಎಂದು, ಜೆ ಸಿ ಬಿ ಚಾಲಕ ಸುರೇಶ್ ಇವರ ಹೇಳಿಕೆಯನ್ನು ನಿಪಿ 51

ಎಂದು, ಓ ಎಸ್ 317/2012 ರಲ್ಲಿನ ಚಾರ್ಜ್ ಶೀಟ್ ನ ದೃಢೀಕೃತ ಪ್ರತಿಯನ್ನು ನಿ ಪಿ 52 ಎಂದು, ಸ್ವತ್ತಿನ ಪಟ್ಟಿಯ ದೃಡೀಕೃತ ಪ್ರತಿಯನ್ನ ನಿಪಿ 53 ಎಂದು, ಮಹಜರ್ ನ ಪ್ರತಿಯನ್ನು ನಿ ಪಿ 54 ಎಂದು, ಗಾಯದ ಪ್ರಮಾಣಪತ್ರದ ಪ್ರತಿಗಳನ್ನು ನಿ ಪಿ 55 ಮತ್ತು ನಿ ಪಿ 56 ಎಂದು, ವಾದಿಯ ಮರು ಹೇಳಿಕೆಯನ್ನು ನಿಪಿ 57 ಎಂದು, ಓ ಎಸ್ 29/2012 ರಲ್ಲೀನ ಆದೇಶ ಪುಟದ ಪ್ರತಿಯನ್ನು ನಿ ಪಿ 58 ಎಂದು, ವಾದಪತ್ರದ ಪ್ರತಿಯನ್ನು ನಿ ಪಿ 59 ಎಂದು, ಓ ಎಸ್ 29/2012 ರಲ್ಲೀನ ಟಿ ಐ ಪ್ರತಿಯನ್ನು ನಿ ಪಿ 60 ಎಂದು, ಆಕಾರ್ ಬಂದ ನ ಪ್ರತಿಯನ್ನು ನಿಪಿ 61 ಎಂದು, 4.05.2012 ರಂದು ಕುದೂರು ಪೊಲೀಸರಿಗೆ ಕೊಟ್ಟ ದೂರಿನ ಪ್ರತಿಯನ್ನು ನಿಪಿ 62 ಎಂದು, ಬಸವರಾಜ್ ಇವರ ವಿರುದ್ದ ನೀಡಿದ ದೂರಿನ ಪ್ರತಿಯನ್ನು ನಿಪಿ 63 ಎಂದು, ದಿನಾಂಕಃ 6.08.2012, 22.10.2012 ರಂದು

ಕೊಟ್ಟ ದೂರಿನ ಪ್ರತಿಗಳನ್ನು ನಿಪಿ 64 ಮತ್ತು ನಿ ಪಿ 65 ಎಂದು, ಪೊಲೀಸರು ಕೊಟ್ಟ ಒಂದು ಹಿಂಬರಹವನ್ನು ನಿ ಪಿ 66 ಎಂದು, 6 ಫೋಟೋಗಳ ಪ್ರತಿಗಳನ್ನು ನಿ ಪಿ 69 ರಿಂದ ನಿ ಪಿ 72 ಎಂದು, ಓ ಎಸ್ 463/2012 ರಲ್ಲೀನ ವಾದಪತ್ರದ ದೃಢೀಕೃತ ಪ್ರತಿಯನ್ನು ನಿ ಪಿ 73 ಎಂದು, ಪ್ರತಿವಾದಪತ್ರದ ದೃಢೀಕೃತ ಪ್ರತಿಯನ್ನು ನಿ ಪಿ 74 ಎಂದು, ಓ ಎಸ್ 153/2014 ರಲ್ಲೀನ ಆದೇಶಪುಟದ ದೃಢೀಕೃತ ಪ್ರತಿಯನ್ನು ನಿ ಪಿ 75 ಎಂದು, ಆ ದಾವೆಯ ವಾದಪತ್ರದ ದೃಢೀಕೃತ ಪ್ರತಿಯನ್ನು ನಿ ಪಿ 76 ಎಂದು, ರಘು ಆಪ್ಟಿಕಲ್ಸ್ ಇವರು ಕೊಟ್ಟ ಎರಡು ಬಿಲ್ ಗಳನ್ನು ನಿ ಪಿ 77 ಮತ್ತು ನಿ ಪಿ 78 ಎಂದು ಸರಿಪರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ : ಇಲ್ಲ

(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.